

# ಮಲ್ಟಿಪರ್ಪಸ್ ಒಡವೆ ಟ್ರೆಂಡ್

**ಹೊಸ ಫ್ಯಾಷನ್‌ಗೆ, ನವನವೀನ ಟ್ರೆಂಡ್‌ಗೆ ಫ್ಯಾಷನ್‌ಪ್ರಿಯರು ತೆರೆದುಕೊಳ್ಳುವ ಸಮಯವಿದು. ಹೊಸದಾಗಿಯೂ ಇರಬೇಕು, ಬಹೂಪಯೋಗಿಯಾಗಿಯೂ ಬಳಕೆಯಾಗಬೇಕು. ಇದಕ್ಕಾಗಿಯೇ ಬಂದಿವೆ ಮಲ್ಟಿಪರ್ಪಸ್ ಒಡವೆಗಳು.**

**■ ಕೃಷ್ಣವೇಣಿ ಪ್ರಸಾದ್ ಮುಳಿಯ**



ಒಂದೇ ಒಡವೆಯನ್ನು ಹಲವು ವಿಧಗಳಲ್ಲಿ ಬಳಸುವಂತಹ ಟ್ರೆಂಡ್ ಇದೀಗ ಜನಪ್ರಿಯವಾಗುತ್ತಿದೆ. ಒಂದೇ ಪೆಂಡೆಂಟ್ ಅನ್ನು ಹಾರದಲ್ಲೂ ಬಳಸಬಹುದು, ಕಿವಿಯೋಲೆ, ಉಂಗುರವಾಗಿಯೂ ಬಳಸಬಹುದು. ಇದೇ ತೋಳ್ಬಂದಿಯೂ ಆಗುತ್ತದೆ, ಸೊಂಟ ಪಟ್ಟಿಯಾಗಿಯೂ ಬಳಕೆಯಾಗುತ್ತದೆ. ಒಂದೆಳೆ ಎರಡೆಳೆ ಸರವಾಗಿಯೂ ಕೊರಳನ್ನಲಂಕರಿಸಿಕೊಳ್ಳಬಹುದು.

ಚಿನ್ನದ ಆಭರಣಕ್ಕೆ ಸಾಟಿ ಯಾವುದಿದೆ ಹೇಳಿ. ಇಂದಿನ ಯುಗದಲ್ಲಿ ಹೊಂಬಣ್ಣದ ಲೋಹ ಬಂಗಾರದ ಬೆಲೆ ಗಗನಕ್ಕೇರಿದರೂ ಇದು ಜೀವನಕ್ಕೆ ಆಧಾರ ಸ್ತಂಭವೂ ಆಗಿರುವುದರಿಂದ ಜನ ಚಿನ್ನ ಕೊಳ್ಳಲು ಹಿಂದೆ ಮುಂದೆ ನೋಡುವುದೂ ಇಲ್ಲ. ಹಳೆಯ ಆಭರಣಗಳು ಒಂದು ತರನಾಗಿ ವಿನ್ಯಾಸ ಹೊಂದಿದರೆ ಇಂದು ನಾವು ಅದನ್ನೇ ವಿಭಿನ್ನವಾಗಿ ಹಲವು ತರದಲ್ಲಿ ಹೇಗೆ ಧರಿಸಬಹುದು ಎಂಬ ಆವಿಷ್ಕಾರದತ್ತ ಮನಸ್ಸು ಮಾಡುತ್ತೇವೆ. ವಿನ್ಯಾಸಕಾರ ತನ್ನ ಹೊಸ ಪರಿಕಲ್ಪನೆಯಲ್ಲಿ ಸದಾ ಹೊಸತನ್ನು ತರುವ ಪ್ರಯತ್ನ ಮಾಡುತ್ತಿದ್ದಾನೆ. ಹಾಗೇ ಆವಿಷ್ಕಾರಗೊಂಡ ಆಭರಣ ಇದು!

### ಆ್ಯಂಟಿಕ್ ಹಾರ

ಆ್ಯಂಟಿಕ್ ಹಾರದಲ್ಲಿ ಎರಡು ತರನಾದ ಸರ ಅಲ್ಲದೆ ಒಂದು ರಿಂಗ್ ಸರ ಇದ್ದು ಪೆಂಡೆಂಟ್‌ನಲ್ಲಿ ಒಟ್ಟು 3 ಜಾಗದಲ್ಲಿ ಹುಕ್‌ಗಳಿರುತ್ತವೆ. ಪೆಂಡೆಂಟ್‌ನ ತುದಿಯ ಎರಡು ಮೂಲೆಗಳಲ್ಲಿ ಇರುವ ಹುಕ್‌ಗೆ ಚೈನ್ ಪೋಣಿಸಿದರೆ ನೆಕ್ಲೇಸ್ ಮತ್ತು ಹಾರಮ್ ಸಿದ್ಧ. ನೆಕ್ಲೇಸ್‌ಗೆ ಅರ್ಧ ಚೈನು ಜೋಡಿಸಿ ಅನಂತರ ರಿಂಗ್ ಚೈನನ್ನು ಜೋಡಿಸಬೇಕು. ಹಾರಮ್‌ಗೆ ಅಗಲದ ಚೈನು ಅನಂತರ ತೆಳ್ಳಗಿನ ಚೈನು ಕೊನೆಯಲ್ಲಿ ರಿಂಗ್ ಚೈನು ಜೋಡಿಸಿದರಾಯಿತು. ನೆಕ್ಲೇಸನ್ನು ಬೇಕಾದ ಹಾಗೆ ಎರಡು ಬಗೆ ಚೈನನ್ನು ಸಮಾರಂಭಗಳಿಗೆ ಹೊಂದಿಕೊಂಡು ಪೆಂಡೆಂಟ್‌ಗೆ ಜೋಡಿಸಿ ಧರಿಸಿ.

